**ಆರ್ .ಡಬ್ಲ್ಯೂ .1** **ಎಫ್. ಡಿ ಪಿ . 8/2013**

**ದಿನಾಂಕಃ- 29.05.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ-ವಾದಿಗಳ ಪರ ವಕೀಲರಾದ ಶ್ರೀಸಿ ಎಸ್ ಎ ರವರಿಂದ</u>**

ಮುನಿವೆಂಕಟಯ್ಯ ರವರಿಗೆ ಬಂದಿರುವ ಭಾಗದ ಬಾಬ್ತು ಸದರಿ ಅರ್ಜಿಯನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ ಎಂದರೆ ಸನನಗೆ ಗೊತ್ತಿ ಲ್ಲ. ಸಾಕ್ಷಿ ಮುಂದುವರೆದು ಅರ್ಜಿದಾರರ ತಂದೆಗೆ ಬಂದ ಭಾಗವನ್ನು ಅವರು ತೆಗೆದುಕೊಳ್ಳಲು ನನ್ನ ಯಾವುದೇ ತಕರಾರು ಇರುವುದಿಲ್ಲ. ಅರ್ಜಿದಾರರು ಯಾವ ಸರ್ವೆನಂ. ಗಳನ್ನು ಕುರಿತು ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತು .

ಸರ್ವೆ.ನಂ. 29/01 ರ ಒಟ್ಟು ವಿಸ್ತೀರ್ಣ 1 ಎಕರೆ 1 ಗುಂಟೆ ಎಂದರೆ ಸರಿ. ನಾನು ಮತ್ತು ಮುನಿವೆಂಕಟಯ್ಯ ರವರು ದಿಃ24.07.1991 ರಲ್ಲಿ ಗೋವಿಂದಯ್ಯ ರವರಿಗೆ ಬರೆದುಕೊಟ್ಟಿರುತ್ತೇವೆ ಎಂದು ಹೇಳಿದ ಹಕ್ಕು ಖುಲಾಸೆ ಪತ್ರನನ್ನ ಬಳಿ ಇಲ್ಲ. ಮುನಿವೆಂಕಟಯ್ಯ ರವರು ಗೋವಿಂದಯ್ಯ ರವರಿಗೆ ಯಾವುದೇ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ಸರ್ವೆ . ನಂ.29/01 ರಲ್ಲಿ ಮುನಿವೆಂಕಟಯ್ಯ ರವರ ಭಾಗಂಶದ 21 ಗುಂಟೆಯನ್ನು ಸೇರಿ ಎಂ.ಆರ್.ನಂ. 15/2000-2001 ನ್ನು ಸೃಷ್ಟಿ ಸಿರುತ್ತೇನೆ ಎಂದರೆಸರಿ.ಗೋವಿಂದಯ್ಯ ರವರು ತೀರಿಹೋಗೇವ ಮುನ್ನ ನನ್ನ ಜೊತೆ ಒಳ್ಳೆ ಒಡನಾಟದಲ್ಲಿದ್ದರು. ಗೋವಿಂದಯ್ಯ ರವರು ನಿಆರ್.35 ರ ಮೇಲೆ ನನ್ನ ಮತ್ತು ಶಿರಸ್ತೇದಾರರ ವಿರುದ್ದ ಉಪವಿಭಾಗಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ.ಸದರಿ ಮೆಲ್ಮನವಿ ಯಲ್ಲಿ ಸರ್ವೆ . ನಂ.29/01 ರಲ್ಲಿ 21 ಗುಂಟೆ ನನಗೆ ಸೇರಿದ್ದು ಮತ್ತು ಉಳಿದ 21 ಗುಂಟೆ ಮುನಿವೆಂಕಟಯ್ಯ ರವರ ಭಾಗಕ್ಕೆ ಸೇರಿದ್ದು ಎಂದು ಹೇಳಿರುತ್ತೆರೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ನಿಆರ್. 36 ರಂತೆ ನನಗೂ ಮತ್ತು ಮುನಿವೆಂಕಟಯ್ಯ ರವರಿಗೆ ಸರ್ವೆ . ನಂ.29/01 ರಲ್ಲಿ ವಿಭಾಗ ವಾಗಿರುತ್ತ ದೆ ಎಂದು ಜ್ಞಾಪನ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ಸರ್ವೆ . ನಂ.29/01 ರಲ್ಲಿ ಮುನಿವೆಂಕಟಯ್ಯ ರವರ ಭಾಗಂಶವನ್ನು ಸೇರಿ 1 ಎಕರೆ 1 ಗುಂಟೆ ಗೆ ಎಂ. ಆರ್ ನ್ನು ಗೋವಿಂದಯ್ಯ ರವರ ಹೆಸರಿಗೆ ವರ್ಗಾಯಿಸಲು ಒಪ್ಪಿ ಜ್ಞಾಪನ ಪತ್ರವನ್ನು ಸಲ್ಲಿಸಿರುತ್ತೇನೆಎಂದರೆಸರಿ.

ಮುನಿವೆಂಕಟಯ್ಯ ರವರ ಭಾಗವನ್ನು ಸೇರಿ ಸರ್ವೆ . ನಂ.29/01 ರ ಖಾತೆ ಮತ್ತು ಪಹಣಿಯನ್ನು ಗೋವಿಂದಯ್ಯ ರವರ ಹೆಸರಿಗೆ ವರ್ಗಾಯಿಸಿ ನಂತರ ಗೋವಿಂದಯ್ಯ ರವರಿಂದ ನಾನು ನಿ .ಆರ್. 38 ರಂತೆ ಸರ್ವೆ . ನಂ.29/01 ನ್ನು ನಾನು ಕ್ರಯಕ್ಕೆ ಪಡೆದಿರುತ್ತೇನೆ ಎಂದರ ಸರಿ. ಮುನಿವೆಂಕಟಯ್ಯ ಮತ್ತು ಅವರ

ಮಕ್ಕಳಿಗೆ ವಂಚನೆ ಮಾಡಲು ಸದರಿ ನಿ.ಆರ್ 38 ಕ್ರಯ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ . ನಂ.29/01 ರಲ್ಲಿ ಮುನಿವೆಂಕಟಯ್ಯ ರವರ ಭಾಗಂಶವನ್ನು ಲಪಟಾಯಿಸಲು ನಾನು ಮತ್ತು ಗೋವಿಂದಯ್ಯ ರವರು ದಾಖಲಾತಿಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಅರ್ಜಿದಾರರು ಸದರಿ ಅರ್ಜಿಯ ಶೆಡ್ಯುಲ್ನಲ್ಲಿ ನಮೂದಿಸಿರುವ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕಿಲ್ಲದಿದ್ದರೂ ಸರ್ವೆ . ನಂ.29/01 ರ ಮೇಲೆ ನನಗೆ ಹಕ್ಕು ಇದೆ ಎಂದು ಸುಳ್ಳು ಹೇಳುತ್ತಿ ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಗುಬ್ಬಿ.**